

ಎಂದು ಯಾರಾದರೂ ಹೇಳುವುದು ಸಾಧ್ಯವೇನು? 'ಮಹಾನ್ ವ್ಯಕ್ತಿಗಳು ತುಂಬಾ ಸರಳವಾಗಿರುತ್ತಾರೆ' ಎನ್ನುವ ಮಾತಿದೆಯಲ್ಲವೇ... ನಿಮಗೆ ಇವರಿಗಿಂತಲೂ ಉತ್ತಮವಾದ ಉದಾಹರಣೆ ಬೇಕೇನು?''

ರೈಲು ಚಲಿಸಿತು. ನನಗೆ ಆತನ ವರ್ತನೆ ತಲೆನೋವು ತರಿಸತೊಡಗಿತ್ತು. ಆತನಿಂದ ತಪ್ಪಿಸಿಕೊಳ್ಳುವುದು ಹೇಗೆ? ಒಂದು ಉಪಾಯ ಹೊಳೆಯಿತು. ನಾನು ನಿದ್ರೆ ಬಂದವನಂತೆ ಕುಳಿತಲ್ಲಿಯೇ ತೂಕಡಿಸತೊಡಗಿದೆ. ಕೂಡಲೇ ಆತ ಕಂಪಾರ್ಟ್‌ಮೆಂಟ್‌ನಲ್ಲಿದ್ದ ಎಲ್ಲರಿಗೂ 'ಜೋರಾಗಿ ಕೆಮ್ಮಬೇಡಿ... ಸೀನಬೇಡಿ... ನಗಬೇಡಿ... ಮಾತನಾಡಬೇಡಿ...' ಎಂದು ಸೂಚಿಸತೊಡಗಿದ. ''ಶ್ಯ... ಶ್ಯ... ಜೋರಾಗಿ ಮಾತನಾಡಬೇಡಿ... ಇಲ್ಲಿ ಮಲಗಿರುವವರು ಯಾರು ಗೊತ್ತೇ? ಗೊತ್ತಿಲ್ಲವೇ? ಇವರೇ ಮಹಾನ್ ಕವಿ...''

ಅಲ್ಲಿದ್ದವರಿಗೆಲ್ಲಾ ನನ್ನನ್ನು ಪರಿಚಯಿಸುತ್ತ, ಅತಿರಂಜಿತವಾಗಿ ಪ್ರಶಂಸಿಸುತ್ತ ದಣಿದ ಆತ ಮೇಲಿನ ಬರ್ತ್‌ಗೆ ಹೋಗಿ ಮಲಗುವುದಕ್ಕೆ ಸಿದ್ಧತೆ ನಡೆಸಿದ. ಅದೇ ಸಂದರ್ಭದಲ್ಲಿ ಮೌಲ್ವಿ ಸಾಹೇಬರು ತಮ್ಮ `ಹುಡುಗ'ನಿಗೆ ಸಲಹೆ ನೀಡಿದರು, ''ಮಗು... ಚಪ್ಪಲಿಯನ್ನು ತಲೆಯ ಬಳಿಯಲ್ಲಿ ಇಟ್ಟುಕೊಂಡು ಮಲಗಿಕೋ...''

ಯಾವಾಗ ನನ್ನ 'ಮಿತ್ರ ಮಹಾಶಯ'ನ ಮೂಗಿನಿಂದ 'ಸೈರನ್' ಮೊಳಗತೊಡಗಿತೋ ಆವಾಗ ನಾನು ಕುಳಿತಲ್ಲಿಂದ ಎದ್ದು ನಿಂತೆ. ಗಯಾ ನಿಲ್ದಾಣ ಸಮೀಪಿಸುತ್ತಿತ್ತು. ನಾನು ನನ್ನ ಚೀಲವನ್ನು ಹೆಗಲಿಗೇರಿಸಿದೆ. ನಿಲ್ದಾಣದಲ್ಲಿ ರೈಲು ನಿಲ್ಲುತ್ತಿದ್ದಂತೆಯೇ ನಾನು ಸದ್ದಿಲ್ಲದೇ ಗಾಡಿಯಿಂದ ಇಳಿದೆ. ಇಳಿಯುವಾಗ ನನ್ನ ಎದೆಬಡಿತ ಜೋರಾಗಿತ್ತು. 'ಒಂದು ವೇಳೆ ನಾನು ಇಳಿಯುವ ಸಂದರ್ಭದಲ್ಲಿ ಮಿತ್ರನಿಗೆ ಎಚ್ಚರಾಗಿಬಿಟ್ಟರೆ ಏನು ಮಾಡುವುದು?' ರೈಲು ಚಲಿಸುವವರೆಗೂ ಪ್ಲಾಟ್‌ಫಾರಂ ಮೇಲೆಯೇ ನಿಂತುಕೊಂಡು, 'ಮಿತ್ರನೇನಾದರೂ ಇಳಿದುಬಿಟ್ಟನೇ?' ಎಂದು ಕುತೂಹಲದಿಂದ ಗಮನಿಸುತ್ತಿದ್ದೆ. ಇಲ್ಲ... ಹಾಗೇನೂ ಆಗಲಿಲ್ಲ. ರೈಲು ಅಲ್ಲಿಂದ ಕದಲಿದ ನಂತರ ನಾನು ಸಹಜ ಸ್ಥಿತಿಗೆ ಮರಳಿದ್ದೆ.

'ಮುಂದಿನ ರೈಲಿನಲ್ಲಿ ಪಾಟ್ನಾಕ್ಕೆ ಹೋದರಾಯಿತು' ಎಂದು ನಿರ್ಧರಿಸಿದ ನಾನು 'ಪ್ರಯಾಣಿಕರ ವಿಶ್ರಾಂತಿ ಕೋಣೆ'ಗೆ ಹೋಗಿ ಒಂದು ಮೂಲೆಯಲ್ಲಿದ್ದ ಬೆಂಚಿನ ಮೇಲೆ ಆರಾಮವಾಗಿ ಕುಳಿತುಕೊಂಡೆ. 'ಅಬ್ಬಾ! ಈಗ ನನ್ನ ಹೃದಯ ಮತ್ತು ಮಿದುಳು ಸರಿಯಾಗಿ ಕೆಲಸ ಮಾಡುತ್ತಿದೆ' ಎನ್ನುವ ಅನುಭವವಾಯಿತು.

ಸ್ವಲ್ಪ ಹೊತ್ತು ಕಳೆಯಿತು. ಕುಳಿತಲ್ಲಿಯೇ ನನ್ನನ್ನು ನಿದ್ರೆ ಆವರಿಸಿತ್ತು. ಸುಂದರವಾದ ಕನಸಿನಲ್ಲಿ ತೇಲಾಡುತ್ತಿದ್ದೆ. ಯಾರೋ ನನ್ನನ್ನು ಅಲುಗಾಡಿಸಿ ಎಚ್ಚರಿಸಿಬಿಟ್ಟರು. ಕಣ್ಣು ತೆರೆದು ನೋಡಿದೆ. ಪಾನ್ ತಿಂದು ಕೆಂಪುಕೆಂಪಾಗಿದ್ದ ಹಲ್ಲುಗಳನ್ನು ಪ್ರದರ್ಶಿಸುತ್ತ, ಕಿರುನಗೆ ಬೀರುತ್ತ ನನ್ನ ಮುಂದೆ ಕಾಣಿಸಿದ್ದ ನನ್ನ ರೈಲು ಸಂಗಾತಿ, 'ಮಿತ್ರ ಮಹಾಶಯ.' ನಾನು ಕಾಣುತ್ತಿರುವುದು ಸ್ವಪ್ನವಾಗಿರಬಹುದೇ ಎಂದು ಒಮ್ಮೆ ಕಣ್ಣುಗಳನ್ನು ಮಿಟುಕಿಸಿ ನೋಡಿದೆ. ಅಲ್ಲ... ಕನಸಲ್ಲ... ವಾಸ್ತವ. ನನ್ನ ಮುಂದೆ ನಿಂತಿದ್ದುದು ಅದೇ ವ್ಯಕ್ತಿಯೇ!

ಹುಸಿನಗು ಬೀರುತ್ತ ಆತ ನುಡಿದ, ''ಹೆ... ಹೆ... ನಿಲ್ದಾಣ ಯಾವುದೆಂದು ಗ್ರಹಿಸುವಾಗ ತಪ್ಪಾಗಿಹೋಯಿತೇನು! ಮಹಾನ್ ಕವಿಗಳು... ಭಾವುಕ ಜೀವಿಗಳು! ಜೆಹೆನಾಬಾದ್‌ನಲ್ಲಿ ನನಗೆ ಎಚ್ಚರವಾಯಿತು. ಕಂಪಾರ್ಟ್‌ಮೆಂಟ್‌ನಲ್ಲಿ ನೀವು ಕಾಣಿಸಲಿಲ್ಲ. ನಿಮಗಾಗಿ ಹುಡುಕಾಡತೊಡಗಿದೆ. ಆಗ ಚೆನ್ನೈ ವ್ಯಕ್ತಿಯು, 'ನಿಮ್ಮ ಗ್ರೇಟ್ ಪೋಯೆಟ್ (ಶ್ರೇಷ್ಠ ಕವಿ) ಗಯಾದಲ್ಲಿ ಇಳಿದುಕೊಂಡರು' ಎಂದು ತಿಳಿಸಿದ. ನಾನು ಅಲ್ಲಿಯೇ ಇಳಿದು, ನಿಮಗೇನೂ ತೊಂದರೆಯಾಗದಿರಲಿ ಎಂದು, ಇತ್ತ ಬರುತ್ತಿದ್ದ